ದಿನಾಂಕಃ 07-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ಈ ದಾವೆಯ ದಾವಾಸ್ತಿಯ ವಿವರ ಮತ್ತು ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಲಕ್ಷ್ಮಿಸಾಗರ ಗ್ರಾಮದ ಸರ್ವೆ ನಂ 97ರಲ್ಲಿ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿ. ಸರ್ವೆ ನಂ 97ರ ಆಸ್ತಿ ಮೂಲತಃ ಸರ್ವೆ ನಂ 17 ಕ್ಕೆ ಸೇರಿದ್ದು. ಸದರಿ ಸರ್ವೆ ನಂ 17ರ ಜಮೀನು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಸದರಿ ಸರ್ವೆ ನಂಬರಿನಲ್ಲಿ 30 ರಿಂದ 40 ಎಕರೆ ಜಮೀನು ಇದೆ. ಸದರಿ ಸರ್ವೆ ನಂಬರಿನಲ್ಲಿ ಸುಮಾರು ಭಾಗ ಸರ್ಕಾರದಿಂದ ದರ್ಖಾಸ್ತು ಮೂಲಕ ಮಂಜೂರಾಗಿದೆ ಎಂದರೆ ಸರಿ. ಸದರಿ ಮಂಜೂರಾತಿ ಯಾರು ಯಾರಿಗೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮಂಜೂರು ಮಾಡಿದ ಜಮೀನನ್ನು ಹೊರತುಪಡಿಸಿ ಸದರಿ ಸರ್ವೆನಂ17 ರಲ್ಲಿ ಇನ್ನೂ ಸರ್ಕಾರದ ಬಗರ್ ಹುಕ್ಕುಂ ಉಳಿದಿದೆ ಎಂದರೆ ಸರಿ. ಸದರಿ ಬಗರ್ ಹುಕ್ಕುಂ ಜಮೀನನ್ನು ಸುಮಾರು ಜನ ಸಾಗು ಮಾಡುತ್ತಿದ್ದಾರೆ ಎಂದರೆ ಸರಿ.

ಸರ್ವೆ ನಂ 17 ರಲ್ಲಿ ನನಗೆ ಯಾವುದೇ ಜಮೀನು ಮಂಜೂರಾಗಿಲ್ಲ. ನಾನು ಸದರಿ ಸರ್ವೆನಂಬರಿನಲ್ಲಿ ವೆಂಕಟರಮಣಶೆಟ್ಟಿಯವರಿಂದ 2 ಎಕರೆ ಜಮೀನನ್ನು ಮತ್ತು ನಾಗವೇಣಮ್ಮ ಕೋಂ ವೆಂಕಟರಮಣಶೆಟ್ಟಿಯವರಿಂದ 2 ಎಕರೆ ಜಮೀನನ್ನು 2013-14ರಲ್ಲಿ ಖರೀದಿಸಿರುತ್ತೇನೆ. ಸದರಿ ಸರ್ವೆ ನಂ 17ರಲ್ಲಿನ ಸದರಿ ಜಮೀನುಗಳನ್ನು ಖರೀದಿಸುವ ಸಮಯಕ್ಕೆ ವೆಂಕಟರಮಣಶೆಟ್ಟಿಯವರ 2 ಎಕರೆ ಜಮೀನು 103 ಎಂದು ಪೋಡಾಗಿದ್ದು ನಾಗವೇಣಮ್ಮನವರು 2 ಎಕರೆ ಜಮೀನು 104 ಎಂದು ಪೋಡಾಗಿರುತ್ತದೆ. ಸದರಿ ಇಬ್ಬರ ಜಮೀನು ಸಹ ಒಂದಕ್ಕೊಂದು ಲಗತ್ತಾಗಿದೆ ಎಂದರೆ ಸರಿ.

ಸದರಿ ಆಸ್ತಿಗಳ ಸರ್ವೆ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ವೆಂಕಟರಮಣಶೆಟ್ಟಿ ಮತ್ತು ನಾಗವೇಣಮ್ಮನವರು ನನ್ನ ಸಂಬಂಧಿಕರಲ್ಲ. ಆದರೆ ನಮ್ಮ ವಾಸ ಮಾಡುತ್ತಿದ್ದ ಸ್ಥಳದಲ್ಲಿ ವಾಸಿಸುತ್ತಿದ್ದರು. ನಾನು ಸದರಿ ವೆಂಕಟರಮಣಶೆಟ್ಟಿ ಮತ್ತು ನಾಗವೇಣಮ್ಮನವರಿಂದ 1 ಎಕರೆಗೆ 90 ಸಾವಿರ ರೂ.ಗಳಂತೆ ಖರೀದಿ ಮಾಡಿರುತ್ತೇನೆ. ಸದರಿ ಕ್ರಯಪತ್ರಗಳು ನನ್ನ ಬಳಿ ಇದೆ. ಸದರಿ ಕ್ರಯಪತ್ರಗಳನ್ನು ನಾನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಮ್ಮ ಪರವಾಗಿ ನಿಶಾನೆಗೊಳಪಟ್ಟ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ತಾನು ಹೇಳಿದಂತಹ ಯಾವುದೇ ಕ್ರಯಪತ್ರದ ದಾಖಲೆಗಳು ಇಲ್ಲದಿರುವುದನ್ನು ನೋಡಿ ದೃಢಪಡಿಸಿಕೊಂಡಿರುತ್ತಾರೆ.

ನಾಗವೇಣಮ್ಮನವರಿಂದ ಜಮೀನಿನ ಕ್ರಯಪತ್ರದ ಬದಲಾಗಿ ನನ್ನ ಹೆಂಡತಿ ಹೆಸರಿಗೆ ವಿಲ್ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿ.ನಾನು ಕ್ರಯಪತ್ರವನ್ನು ಬರೆಸಿಕೊಂಡರೆ ಸರ್ಕಾರಕ್ಕೆ ಸ್ಟಾಂಪ್ ಡ್ಯೂಟಿ ಮತ್ತು ಮುದ್ರಾಂಕವನ್ನು ಶುಲ್ಕವನ್ನು ಕಟ್ಟುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ವಿಲ್ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ದರ್ಖಾಸ್ತು ಮೂಲಕ ಮಂಜೂರಾದ ಕಾರಣ ತೊಡಕಾಗಬಾರದೆಂದು ಬರೆಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಾಗವೇಣಮ್ಮನವರು ಕಳೆದ 4-5 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ನಾಗವೇಣಮ್ಮನವರು ಬರೆದುಕೊಟ್ಟಿರುವ ವಿಲ್ ಪತ್ರದಲ್ಲಿ ಆಸ್ತಿಯ ಚೆಕ್ಕುಬಂದಿಗಳು ಪೂರ್ವಕ್ಕೆ ಸರ್ವೆ ನಂ 105 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂ 103ರ ಜಮೀನು, ಉತ್ತರಕ್ಕೆ ಸರ್ವೆ ನಂ 111 ರ ಜಮೀನು, ದಕ್ಷಿಣಕ್ಕೆ ಸರ್ವೆ ನಂ 96ರ ಜಮೀನು ಬರುತ್ತದೆ. ನಾನು ಈಗ ಹೇಳಿದ ಜಮೀನಿನ ಚೆಕ್ಕುಬಂದಿಗಳು ಸದರಿ ನೊಂದಾಯಿತ ವಿಲ್ ನಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ಲಾಟ್ ನಂಬರುಗಳನ್ನು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಲಾಟ್ ನಂಬರುಗಳನ್ನು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ.

ನಾನು ಖರೀದಿ ಮಾಡಿದ 4 ಎಕರೆ ಆಸ್ತಿಯಲ್ಲಿ ನಾನು ಪೂರಾ ಸ್ವಾಧೀನದಲ್ಲಿದ್ದೆನೆಯೇ ಎಂದರೆ ಸಾಕ್ಷಿ 3 ಎಕರೆಯಲ್ಲಿ ಅನುಭವದಲ್ಲಿದ್ದು. ಉಳಿದ 1 ಎಕರೆ ಜಮೀನನ್ನು ವಾದಿಯ ಜಿ ಪಿ ಎ ರವರು ಒತ್ತುವರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ 96ರ ಜಮೀನನ್ನು ಲಕ್ಷ್ಮಿಸಾಗರದ ಯಾರೋ ಮಲ್ಲಪ್ಪ ಎನ್ನುವವರು ಖರೀದಿಸಿದ್ದು ಅವರ ನಿಖರವಾದ ಹೆಸರು ನನಗೆ ನೆನಪಿಲ್ಲ, ಸದರಿ ಮಲ್ಲಪ್ಪನವರು ಖರೀದಿಸಿದ ಜಮೀದಿನಲ್ಲಿ ಖರೀದಿದಾರರೇ ಅನುಭವದಲ್ಲಿದ್ದಾರೆಯೇ ಎಂದರೆ ಸಾಕ್ಷಿ ಅದನ್ನು ಸಹ ವಾದಿಯ ಜಿ ಪಿ ಎ ಹೋಲ್ಡರ್ ರವರೇ ಒತ್ತವರಿ ಮಾಡಿದ್ದಾರೆ ಎಂದುನುಡಿಯುತ್ತಾರೆ.

ನಾನು ಈ ದಾವೆಗೆ ಸಲ್ಲಿಸಿರುವ ತಕರಾರಿನಲ್ಲಿ ವಾದಿ ನಮ್ಮ ಜಮೀನನ್ನು ಒತ್ತುವರಿ ಮಾಡಿದ ಬಗ್ಗೆ ಉಲ್ಲೇಖಿಸಿರುತ್ತೇನೆ. ನಾನು ಸಲ್ಲಿಸಿರುವ ನನ್ನ ಪ್ರ.ಪತ್ರದಲ್ಲಿಯೂ ಸಹ ಸದರಿ ವಿಚಾರವನ್ನು ಉಲ್ಲೇಖಿಸಿದ್ದೆನೆ. ನಾನು ನನ್ನ ತಕರಾರಿನಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಾಗಲಿ ಸರ್ವೆ ನಂ 103 ಮತ್ತು 104 ರಲ್ಲಿನ ಜಮೀನನ್ನು ಒತ್ತುವರಿ ಮಾಡಿರುವ ವಿಚಾರವನ್ನು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ.

ನಿಡಿ-4 ಮತ್ತು 5ರಲ್ಲಿ ನಮ್ಮ ಜಮೀನನ್ನು ಯಾರು ಒತ್ತುವರಿ ಮಾಡಿದ್ದಾರೆ ಎಂಬ ಬಗ್ಗೆ ಉಲ್ಲೇಖವಿದೆ ಎಂದರೆ ಸರಿ. ಸದರಿ ಒತ್ತುವರಿಯಾದ ಜಮೀನನ್ನು ಬಿಡಿಸಿಕೊಳ್ಳಲು ನಾನು ಯಾವುದೇ ದಾವೆಯನ್ನು ದಾಖಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಈ ದಾವೆಯಲ್ಲೆ ಮುಂದುವರೆಯುತ್ತಿದ್ದೆನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಹ ಯಾವುದೇ ಪ್ರತಿದಾವೆಯನ್ನು ಸಹ ಹಾಕಿಲ್ಲ ಎಂದರೆ ಸಾಕ್ಷಿನಮ್ಮ ವಕೀಲರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

ಸರ್ವೆನಂ 103ರ ದಕ್ಷಿಣಕ್ಕೆ ಸರ್ವೆ ನಂ 95ರ ಜಮೀನು ಬರುತ್ತದೆ ಎಂದರೆ ಸರಿ.ಸರಿದ 95ರ ಜಮೀನಿನ ಮಾಲೀಕರು ಲಲಿತಮ್ಮ ಎಂದು ಇದ್ದು ಸದರಿ ಲಲಿತಮ್ಮನವರು ಈಗ ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ಪ್ರಸ್ತುತ ಸರ್ವೆ ನಂ 95 ಮತ್ತು 96ರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ವಾದಿಯವರೇ ಒತ್ತುವರಿ ಮಾಡಿ ಸಾಗಹು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ, ಸದರಿ ಜಮೀನುಗಳ ಮಾಲೀಕರು ಯಾರು ಎಂದರೆ ಸಾಕ್ಷಿ ಲಕ್ಷ್ಮಿ ಸಾಗರದ ಮಲ್ಲಪ್ಪ ಎಂದು ನುಡಿಯುತ್ತಾರೆ.
(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**　　　　**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.